ಶ್ರೀ ಕೆ. ರಾಮಭಟ್.—ಸ್ವಾಮಿ ಪುತ್ತೂರು ನಗರದ ಬಸ್ ನಿಲ್ದಾಣವನ್ನು ಕರ್ನಾಟಕ ರಾಜ್ಯದ ರಸ್ತೆ ಸಾರಿಗೆ ಸಂಸ್ಥೆಯ ವಶಕ್ಕೆ ತೆಗೆದುಕೊಂಡು ಎರಡು ವರ್ಷವಾಯಿತು. ಈಗ್ಗೆ ಎರಡು ವರ್ಷಗಳ ಮೊದಲೇ ಈ ಬಸ್ ಸ್ಟಾಂಡನ್ನು ವಿಸ್ತಾರಣೆ ಮಾಡುತ್ತೇವೆಂದು ಸಂಬಂಧ ಪಟ್ಟ ಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದರು. ಆದರೆ ಈ ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರವನ್ನು ನೋಡಿದರೆ ಈ ಶತಮಾನದ ಅಂತ್ಯದವರೆವಿಗೂ ಈ ಬಸ್ ಸ್ಟಾಂಡ್ ವಿಸ್ತರಣೆ ಆಗುವ ಸೂಚನೆ ಕಾಣುವುದಿಲ್ಲ. ಇದಕ್ಕೆ ಪ್ಲಾನು ಏಸ್ಟಿಮೇಟು ಏನಾದರೂ ತಯಾರು ಮಾಡಿದ್ದೀರಾ ?

† ಶ್ರೀ ಎಂ. ಎಂ. ಜೆ. ಸದ್ಯೋಜಾತ.—೬ ಲಕ್ಷ ರೂಪಾಯಿಗಳ ಯೋಜನೆಯಲ್ಲಿ ಈ ಬಸ್ ನಿಲ್ದಾಣದ ನಿರ್ಮಾಣವನ್ನು ಪ್ರಾರಂಭ ಮಾಡಲಾಗುತ್ತದೆ.

ಶ್ರೀ ಕೆ. ರಾಮಭಟ್.—ಸ್ವಾಮಿ ಈಗ ಆಗಿರತಕ್ಕ ಬಸ್ ಸ್ಟಾಂಡಿನಲ್ಲಿ ಕುಳಿತು ಕೊಳ್ಳುವುದಕ್ಕೆ ಜಾಗವಿಲ್ಲ. ಬೆಂಚುಗಳಿಲ್ಲ, ಅಲ್ಲಿನ್ಸ್ಟಿ ಬಸ್ ಸ್ಟಾಂಡಿನಲ್ಲಿ ಹಳ್ಳಗಳಿವೆ. ಜನಗಳಿಗೆ ತುಂಬಾ ತೊಂದರೆಯಾಗುತ್ತದೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಶ್ರೀ ಎಂ ಎಂ ಜೆ. ಸದ್ಯೋಜಾತ.—ಅದಕ್ಕಾಗಿಯೇ ಹೊಸ ಬಸ್ ನಿಲ್ದಾಣವನ್ನು ಕಟ್ಟುವುದಕ್ಕೆ ಕ್ರಮ ಕೈಗೊಳ್ಳುತ್ತೇವೆಂದು ಈಗಾಗಲೇ ನಾನು ಹೇಳಿದ್ದೇನೆ.

ಶ್ರೀ ಕೆ ರಾಮಭಟ್.—ಈ ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರದಲ್ಲಿ ರಸ್ತೆ ಸಾರಿಗೆ ಸಂಸ್ಥೆಯ ಹಣಕಾಸು ಪರಿಸ್ಥಿತಿ ಉತ್ತಮಗೊಂಡನಂತರ ಬಸ್ ನಿಲ್ದಾಣ ನಿರ್ಮಿಸುವ ಕಾರ್ಯವನ್ನು ಕೈಗೊಳ್ಳಲಾಗವುದೆಂದು ಹೇಳಿದ್ದೀರಿ ಯಾವಾಗ ಕೈಗೊಳ್ಳುತ್ತೀರಾ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಇದೇ ವರ್ಷವೇ ಪ್ರಾರಂಭ ಮಾಡುತ್ತೇವೆ.

Population of Gondali Community in the State

481. SRI R. S. NADONI (Raibag).—Will the Chief Minister be pleased to state:—

(a) the population of Gondali Community (including Budubudake and Joshi) in Karnataka State ;

(b) is there any representatives belonging to these communities in our State Legislature. If not, the action taken by the Government to bring up these communities in the political field ;

(c) is there any one holding highest Government post in the State services belonging to Gondali community ? If so, what is their No. and particulars of their appointment ;

(d) in case, if there are no officers belonging to this community, what are the actions taken by the Government to give proper representation to them in the services of the State?

SRI R. GUNDU RAO (Chief Minister).—

(a) Particulars about the population of Gondali caste (including Budabudake and Joshi) are not available.

(b) Since the legislators list is not prepared on the basis of the caste, the required information is not available. For political advancement of a particular community, specific action has not been taken.

(c) Particulars are not available with the Government.

(d) In Government Order No. DPAR 1 SBS 77 dated 4-3-1977 Gondali community has been classified as Backward Tribe and in direct recruitment 5% of the posts are reserved for Backward Tribes. Gondali community is also entitled to get this benefit.

ಶ್ರೀ ಆರ್. ಎಸ್. ನಡೋಣಿ.—ಸ್ವಾಮಿ, ಈ ಗೋಂಧಳಿ ಜನಾಂಗದವರು ಹಳ್ಳಿಯಿಂದ ಹಳ್ಳಿಗೆ ತಿರುಗಾಡುತ್ತಾ ಜೋತಿಷ್ಯವನ್ನು ಹೇಳಿಕೊಂಡು ಜೀವನವನ್ನು ಸಾಗಿಸುತ್ತಿದ್ದಾರೆ. ಇಂತಹವರಿಗೆ ಸ್ಥಳೀಯವಾಗಿ ಒಂದೇ ಕಡೆ ಉದ್ಯೋಗಾವಕಾಶ ದೊರೆಯುತ್ತದೆಯೇ ? ಇದಕ್ಕಾಗಿ ಸರ್ಕಾರದವರು ಯಾವುದಾದರೂ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆಯೇ ?

† ಶ್ರೀ ಆರ್. ಗುಂಡೂರಾವ್.—ಯಾವ ಕಾರ್ಯಕ್ರಮವನ್ನು ಇನ್ನೂ ಹಾಕಿಕೊಂಡಿಲ್ಲ. ಅವರು ಒಂದೇ ಕಡೆ ಇದ್ದರೆ ಅವರಿಗೆ ಸರ್ಕಾರ ಸಹಾಯ ಮಾಡಬಹುದು. ಅವರು ಒಂದೇ ಕಡೆ ಇಲ್ಲದಿದ್ದರೆ ಅವರಿಗೆ ಯಾವ ಸಹಾಯವನ್ನು ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಜಿ. ಕೆ. ತಕ್ಕೇದ್.—ಈ ಗೋಂಧಳಿ ಜನಾಂಗದವರಿಗೆ ಸಮಾಜದಲ್ಲಿ ಆರ್ಥಿಕವಾಗಿ ಸಾಮಾಜಿಕವಾಗಿ ಸಿಕ್ಕುವಂತಹ ಸೌಲಭ್ಯಗಳು ಇವರಿಗೂ ಸಿಕ್ಕುವಂತೆ ಏನಾದರೂ ಸರ್ಕಾರದವರು ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಯಾವ ತರಹ ಸಹಾಯ ಅವರಿಗೆ ಬೇಕು ಎಂದು ಸರ್ಕಾರದವರನ್ನು ಕೇಳಿದರೆ ಹಿಂದುಳಿದವರಿಗೆ ಏನೇನು ಕಾರ್ಯಕ್ರಮಗಳು ಇವೆ ಅವುಗಳನ್ನು ಇವರಿಗೂ ಅನ್ವಯಿಸುತ್ತೇವೆ.

ಶ್ರೀ ಜಿ. ಕೆ. ತಕ್ಕೇದ್.—ಈ ಜನಾಂಗದವರು ಈಗಾಗಲೇ ಹುಬ್ಬಳ್ಳಿಯಲ್ಲಿ ಒಂದು ಮಹಾ ಸಭೆಯನ್ನು ನಡೆಸಿದ್ದಾರೆ. ಆ ಮಹಾ ಸಭೆಯಲ್ಲಿ ಅವರು ಅನೇಕ ಗೊತ್ತುವಳಿಗಳನ್ನು ಮಾಡಿ ಈಗಾಗಲೇ ಸರ್ಕಾರಕ್ಕೆ ಕಳುಹಿಸಿದ್ದಾರೆ. ಆ ಗೊತ್ತುವಳಿಗಳನ್ನು ತರಿಸಿಕೊಂಡು ತಾವು ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ಆರ್. ಗುಂಡೂರಾವ್.—ಅವರು ವೈಯಕ್ತಿಕವಾಗಿ ಯಾವ ಸಹಾಯ ಮಾಡಬೇಕು ಯಾವ ರೀತಿಯ ಸಹಾಯ ಮಾಡಬೇಕು ಎಂದು ಅವರು ಸರ್ಕಾರದ ಮುಂದೆ ಬಂದರೆ ನಾವು ಅವರಿಗೆ ಸಹಾಯ ಮಾಡಬಹುದು.

ಶ್ರೀ ಆರ್. ಎಸ್. ನಡೋಣಿ.—ಆ ಜನಾಂಗದವರು ತಮ್ಮ ಪ್ರಮುಖವಾದ ಬೇಡಿಕೆಗಳನ್ನು ಸರ್ಕಾರದ ಮುಂದೆ ಇಟ್ಟರೂ ಸಹಾ ಯಾವ ತರಹ ಅನುಕೂಲವು ಆಗಿಲ್ಲ. ಆದ್ದರಿಂದ ಆದಷ್ಟು ಬೇಗ ಅವರ ಬೇಡಿಕೆಗಳನ್ನು ಈಡೇರಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಆದಷ್ಟು ಬೇಗ ಪರಿಶೀಲನೆ ಮಾಡುತ್ತೇವೆ.

ಶ್ರೀ ವಿ. ವಿ. ಪತ್ತಾರ್.—ಈ ಜನಾಂಗದವರು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಬಹಳ ಹಿಂದೆ ಇದ್ದಾರೆ. ಇವರು ಹಳ್ಳಿಯಿಂದ ಹಳ್ಳಿಗೆ ಹೋಗಿ ಹಳೆಯ ಮತ್ತು ಹೊಸ ಬಾಂಡ್ಲಿಗಳನ್ನು ಮಾರುವಂತಹ ಉದ್ಯೋಗವನ್ನು ಅವಲಂಬಿಸಿದ್ದಾರೆ. ಈ ಉದ್ಯಮಕ್ಕೆ ಅವರಿಗೆ ಹೆಚ್ಚು ಪ್ರೋತ್ಸಾಹ ಸಿಕ್ಕುವಂತೆ ಸಹಾಯ ಮಾಡುತ್ತೀರಾ ? ಮತ್ತು ಅವರು ರಾಜಕೀಯವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದು ಇರುವುದರಿಂದ ಅವರಿಗೆ ಸ್ಥಾನಮಾನಗಳನ್ನು ಕೊಡುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಅವರು ಯಾವುದಾದರೂ ಸೊಸೈಟಿಗಳನ್ನು ಮಾಡಿಕೊಂಡಿದ್ದರೆ ಅದಕ್ಕೆ ಸಹಾಯ ಮಾಡಬಹುದು. ನಮಗೆ ಯಾವುದಾದರೂ ಸಹಾಯ ಮಾಡಿ ಎಂದು ಸರ್ಕಾರವನ್ನು ಕೇಳಿಕೊಂಡರೆ ನಾವು ಸಹಾಯ ಮಾಡಬಹುದು. ರಾಜಕೀಯವಾಗಿ ಜಾತಿಗೆ ಸಂಬಂಧಪಟ್ಟ ಹಾಗೆ ಸಹಾಯ ಮಾಡಿ ಎಂದು ಕೇಳಿದರೆ ಅದು ಕಷ್ಟವಾಗುವುದು, ಅವರು, ಅವರಿಗೆ ಎಂತಹ ಸಹಾಯ ಬೇಕು ಎಂದು ಕೇಳಿದರೆ ಅದನ್ನು ವಿಚಾರ ಮಾಡಬಹುದು.

ಶ್ರೀ ಸಿ. ಎಂ. ಇಬ್ರಾಹಿಂ (ಯೋಜನೆ ಹಾಗೂ ವಕ್ಫ್ ಮಂತ್ರಿಗಳು). – ಈ ಪ್ರಶ್ನೆಗೆ ಸಂಬಂಧಪಟ್ಟ ಹಾಗೆ ಕೆಲವು ತಪ್ಪುಗಳಿರುವುದರಿಂದ ಈ ಪ್ರಶ್ನೆಯನ್ನು ಮಾನ್ಯ ಅಧ್ಯಕ್ಷರು ತಡೆಹಿಡಿಯಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಉಪಾಧ್ಯಕ್ಷರು.—ಈ ಪ್ರಶ್ನೆಯನ್ನು ತಡೆಹಿಡಿಯಲಾಗಿದೆ.

Progress of Vijayanagar Steel Plant

93. SRI S. M. SHEERNALY CHANDRASHEKAR (Hosanagar).—Will the Chief Minister be pleased to state.—

(a)when was the foundation stone laid to the Vijayanagar Steel Plant by the Hon'ble Prime Minister ;

(b) what was the amount spent so far and the progress achieved ;

(c) is the Government satisfied about the progress ;

(d) why this inordinate delay ;

(e) when the Government will expect to complete the project and bring it under production stage ?

SRI R. GUNDU RAO (Chief Minister).—

(a October, 1971.

(b) Rs. 4.4 crores (provisional) as on 31st December 1980.

The following jobs have been completed :

1. Land acquisition for the plant and its fencing.
2. Soil investigation.
3. Raw material investigation and testing.
4. Preliminary traffic-cum engineering survey by Railways.
5. Development and Master Plans for the Steel Township.

(c) Government of Karnataka has taken up the question of sanction the Project afresh with the Government of India.

(d) The detailed Project Report is under scrutiny and investment decision is yet to be taken.

(e) The time required would depend on the schedule drawn up by the Government of India and the provision of adequate funds.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಸ್ವಾಮಿ, ವಿಜಯನಗರ ಉಕ್ಕಿನ ಕಾರ್ಖಾನೆಯು ಗೊತ್ತುಮಾಡಿರತಕ್ಕ ಮೊಬಲಗು ಎಷ್ಟು ? ಮತ್ತು ಇವತ್ತಿನವರೆವಿಗೆ ಆದರ ಬಗ್ಗೆ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಆರ್. ಗುಂಡೂರಾವ್.—ವಿಜಯನಗರ ಉಕ್ಕಿನ ಕಾರ್ಖಾನೆ ಪೂರ್ತಿ ಮುಗಿಯಬೇಕಾದರೆ ಸುಮಾರು ಸಾವಿರದ ಎಂಟುನೂರು ಕೋಟಿ ರೂಪಾಯಿಗಳು ಖರ್ಚಾಗುತ್ತದೆ. ೧೯೭೧ನೇ ಇಸವಿಯಲ್ಲಿ ಈ ಕಾರ್ಖಾನೆಗೆ ಶಂಕುಸ್ಥಾಪನೆ ಮಾಡಿದ ಮೇಲೆ ಈ ಕಾರ್ಖಾನೆಗೆ ಇದುವರೆಗೆ ಮೂರೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ.